# ತುಮಕೂರು ವಿಶ್ವವಿದ್ಯಾನಿಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ. ಹೆಚ್. ರಸ್ತೆ, ತುಮಕೂರು-572 103

ಸಂಖ್ಯೆ: ತುವಿ: ಡಿಇವಿ-02:2024-25 | 2618

ದಿನಾಂಕ:09.12.2024

## :ಸುತ್ತೋಲೆ:

ವಿಷಯ: ವಿದ್ಯಾರ್ಥಿಗಳು ಮತದಾರರ ಪಟ್ಟಿಯಲ್ಲಿ ನೊಂದಾಯಿಸಿಕೊಳ್ಳುವ ಕುರಿತು.

ಉಲ್ಲೇಖ: 1. ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಚೇರಿ ಪತ್ರ ಸಂಖ್ಯೆ:ಚು(1)ವಿವ/23/2024-25

2. ಆಯುಕ್ತರು, ಹಾಗೂ ಮತದಾರರ ನೊಂದಣಾಧಿಕಾರಿ, 132- ತುಮಕೂರುನಗರ ವಿಧಾನಸಭಾಕ್ಷೇತ್ರ, ತುಮಕೂರು ಇವರ ಪತ್ರ ಸಂಖ್ಯೆ:ಚುನಾವಣೆ:ಸಿ.ಆರ್/01/2024-25 ದಿನಾಂಕ:06.12.2024

3. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ:09.12.2024

*****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮುಖ್ಯ ಚುನಾವಣಾಧಿಕಾರಿಗಳು, ಭಾರತ ಚುನಾವಣಾ ಆಯೋಗ, ಕರ್ನಾಟಕ, ಬೆಂಗಳೂರು ಇವರು ಸೂಚಿಸಿರುವಂತೆ ಜಿಲ್ಲೆಯಲ್ಲಿ ಯುವ ಮತದಾರರ ನೋಂದಣಿಗೆ ಹೆಚ್ಚಿನ ಒತ್ತು ನಿಡಬೇಕಾಗಿದ್ದು, 132-ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿ ಯುವ ಮತದಾರರ ನೋಂದಣಿ ಪ್ರಗತಿಯು ತೃಪ್ತಿಕರವಾಗಿರುವುದಿಲ್ಲ. ಈ ಸಂಬಂಧ ಮಾನ್ಯ ಮುಖ್ಯ ಚುನಾವಣಾಧಿಕಾರಿಗಳ ಕಚೇರಿಯಿಂದ ಆಕ್ಷೇಪ ವ್ಯಕ್ತಪಡಿಸಲಾಗಿರುವುದರಿಂದ ಯುವ ಮತದಾರರ ನೋಂದಣಿಗೆ ಕ್ರಮವಹಿಸಿ ಗರಿಷ್ಠಮಟ್ಟದ ಪ್ರಗತಿ ಸಾಧಿಸಲು ಉಲ್ಲೇಖ(1)ರ ಪತ್ರದಲ್ಲಿ ಸೂಚಿಸಲಾಗಿರುತ್ತದೆ ಎಂದು ತಿಳಿಸಿರುತ್ತಾರೆ. ಆದ್ದರಿಂದ, 132- ತುಮಕೂರು ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯುವ ಮತದಾರರನ್ನು VHA Mobile App, NVSP Web Portal ಮೂಲಕ ದಿನಾಂಕ:14.12.2024 ರೊಳಗಾಗಿ ಕಡ್ಡಾಯವಾಗಿ ನೋಂದಣಿ ಮಾಡಿಸುವಂತೆ ಪಾಲಿಕೆ ವ್ಯಾಪ್ತಿಗೆ ಬರುವ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡುವಂತೆ ಉಲ್ಲೇಖ(2)ರ ಪತ್ರದಲ್ಲಿ ತಿಳಿಸಿರುತ್ತಾರೆ.

ಮೇಲ್ಕಂಡ ಉಲ್ಲೇಖ(02)ರ ಪತ್ರ ಮತ್ತು ಲಗತ್ತನ್ನು ಈ ಸುತ್ತೋಲೆಯೊಂದಿಗೆ ಲಗತ್ತಿಸಿದ್ದು, **VHA Mobile App, NVSP Web Portal** ಮೂಲಕ **ದಿನಾಂಕ:14.12.2024** ರೊಳಗಾಗಿ ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಲು ತಮ್ಮ ವಿಭಾಗಗಳ/ಕಾಲೇಜುಗಳ ವಿದ್ಯಾರ್ಥಿಗಳಿಗೆ ಸೂಚಿಸುವಂತೆ ಈ ಮೂಲಕ ತಿಳಿಸಲಾಗಿದೆ.

ಆದೇಶದ ಮೇರೆಗೆ

ಉಪಕುಲಸಚಿವರು
ಅಭಿವೃದ್ಧಿ ವಿಭಾಗ
ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

ಗೆ,

1. ಎಲ್ಲಾ ಅಧ್ಯಕ್ಷರು/ಸಂಯೋಜಕರುಗಳಿಗೆ, ಸ್ನಾತಕೊತ್ತರ ಅಧ್ಯಯನ ವಿಭಾಗಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
2. ಪ್ರಾಂಶುಪಾಲರು, ವಿಶ್ವವಿದ್ಯಾನಿಲಯ ಘಟಕ/ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.

ಪ್ರತಿಗಳು:

1. ಸಿಸ್ಟಮ್ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-ಸಂಬಂಧಪಟ್ಟವರಿಗೆ ಕಳುಹಿಸಲು ಸೂಕ್ತಕ್ರಮವಹಿಸುವ್ಯದು.
2. ಮಾನ್ಯ ಕುಲಪತಿಗಳ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
3. ಕಚೇರಿ ಪ್ರತಿ.

# ತುಮಕೂರು ಮಹಾನಗರಪಾಲಿಕೆ, ತುಮಕೂರು

## 132–ತುಮಕೂರು ನಗರ ವಿಧಾನಸಭಾ ಕ್ಷೇತ್ರ

ದೂರವಾಣಿ ಸಂಖ್ಯೆ: 0816–2271200, 2272200 ಇ–ಮೇಲ್: aero.132tmkcity@gmail.com


ನಂ:ಚುನಾವಣೆ:ಸಿ.ಆರ್/01/2024–25 ದಿನಾಂಕ:06.12.2024

ರವರಿಗೆ,
ಕುಲಪತಿಗಳು,
ತುಮಕೂರು ವಿಶ್ವವಿದ್ಯಾಲಯ,
ಬಿ.ಹೆಚ್. ರಸ್ತೆ, ತುಮಕೂರು.

ಮಾನ್ಯರೆ,

ವಿಷಯ: ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2025ರ ಸಂಬಂಧ ಯುವ ಮತದಾರರ ನೋಂದಣಿ ಪ್ರಗತಿ ಕುಂಠಿತವಾಗಿರುವ ಕುರಿತು.

ಉಲ್ಲೇಖ: ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಚುನಾವಣಾಧಿಕಾರಿಗಳ ಕಛೇರಿ ಪತ್ರ ಸಂಖ್ಯೆ :ಚು(1)ವಿವ/23/2024–25.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ 01.01.2025 ಅನ್ನು ಅರ್ಹತ ದಿನಾಂಕವಾಗಿ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2025 ಕ್ಕೆ ಸಂಬಂಧಿಸಿದಂತೆ ದಿನಾಂಕ 29.10.2024 ರಂದು ಕರಡು ಮತದಾರರ ಪಟ್ಟಿಗಳನ್ನು ಪ್ರಚುರಪಡಿಸಲಾಗಿದೆ.

ದಿನಾಂಕ 29.10.2024 ರಿಂದ ದಿನಾಂಕ 28.11.2024 ರವರೆಗೆ ಹಕ್ಕು ಮತ್ತು ಆಕ್ಷೇಪಣೆಗಳನ್ನು ಸ್ವೀಕರಿಸಲು ಅವಕಾಶವಿರುತ್ತದೆ. ಭಾರತ ಚುನಾವಣಾ ಆಯೋಗದ ಮತ್ತು ಮುಖ್ಯ ಚುನಾವಣಾಧಿಕಾರಿಗಳು, ಕರ್ನಾಟಕ, ಬೆಂಗಳೂರು ರವರು ಸೂಚಿಸಿರುವಂತೆ ಜಿಲ್ಲೆಯಲ್ಲಿ ಯುವ ಮತದಾರರ ನೋಂದಣಿಗೆ ಹೆಚ್ಚಿನ ಒತ್ತು ನೀಡಬೇಕಾಗಿದ್ದು, 132–ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿ ಯುವ ಮತದಾರರ ನೋಂದಣಿ ಪ್ರಗತಿಯು ತೃಪ್ತಿಕರವಾಗಿರುವುದಿಲ್ಲ ಮತದಾರರ ಪಟ್ಟಿ ವಿಶೇಷ ಸಂಕ್ಷಿಪ್ತ ಪರಿಷ್ಕರಣೆ–2024ರ ಸಾಲಿನಲ್ಲಿ 132– ತುಮಕೂರು ನಗರ ವಿಧಾನಸಭಾ ಕ್ಷೇತ್ರದಲ್ಲಿ 6648 (2.45%) ಯುವ ಮತದಾರರ ನೋಂದಣಿ ಮಾಡಲಾಗಿರುತ್ತದೆ. ಆದರೆ ಕರಡು ಮತದಾರರ ಪಟ್ಟಿ ಪ್ರಕಟಣೆ ನಂತರ ಈ ತಹಲ್‌ವರೆಗೆ 2923 (1.08%) ಯುವ ಮತದಾರರ ನೋಂದಣಿಗೆ ಕ್ರಮವಹಿಸಲಾಗಿದೆ. ಕಳೆದಬಾರಿಗೆ ಹೋಲಿಸಿದಲ್ಲಿ ಯುವ ಮತದಾರರ ನೋಂದಣಿಯು ಸಾಕಷ್ಟು ಪ್ರಮಾಣದಲ್ಲಿ ನಡೆಸದೇ ಇರುವುದು ಕಂಡುಬರುತ್ತದೆ. ಜಿಲ್ಲೆಯ ಇತರೆ ವಿಧಾನಸಭಾ ಕ್ಷೇತ್ರಗಳಿಗೆ ಹೋಲಿಸಿದಲ್ಲಿ ತುಮಕುರು ನಗರದಲ್ಲಿ ಹೆಚ್ಚಿನ ಶಿಕ್ಷಣ ಸಂಸ್ಥೆಗಳಿದ್ದು, ಯುವ ಮತದಾರರ ನೋಂದಣಿಯು ಗರಿಷ್ಟ ಮಟ್ಟದಲ್ಲಿ ನಡೆಸಬೇಕಾಗಿರುತ್ತದೆ. ಆದರೆ ಯುವ ಮತದಾರರ ನೋಂದಣಿಯು ತೃಪ್ತಿದಾಯಕವಾಗಿರುವುದಿಲ್ಲ. ಈ ಸಂಬಂಧ ಮಾನ್ಯ ಮುಖ್ಯ ಚುನಾವಣಾಧಿಕಾರಿಗಳ ಕಛೇರಿಯಿಂದ ಆಕ್ಷೇಪ ವ್ಯಕ್ತಪಡಿಸಲಾಗಿರುತ್ತದೆ. ಆದ್ದರಿಂದ, ಯುವ ಮತದಾರರ ನೋಂದಣಿಗೆ ಕ್ರಮವಹಿಸಿ ಗರಿಷ್ಠಮಟ್ಟದ ಪ್ರಗತಿ ಸಾಧಿಸಲು ಉಲ್ಲೇಖಿತ ಪತ್ರ ರೀತ್ಯಾ ಸೂಚಿಲಾಗಿರುತ್ತದೆ.

ಆದ್ದರಿಂದ, 132– ತುಮಕೂರು ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಯುವ ಮತದಾರರನ್ನು VHA Mobile App, NVSP Web portal ಮೂಲಕ ದಿನಾಂಕ: 14.12.2024 ರೊಳಗಾಗಿ ಕಡ್ಡಾಯವಾಗಿ ನೋಂದಣಿ ಮಾಡಿಸುವಂತೆ ಪಾಲಿಕೆ ವ್ಯಾಪ್ತಿಗೆ ಬರುವ ಸರ್ಕಾರಿ, ಅನುದಾನಿತ, ಅನುದಾನ ರಹಿತ ಪ್ರಥಮದರ್ಜೆ ಕಾಲೇಜುಗಳ ಪ್ರಾಂಶುಪಾಲರಿಗೆ ನಿರ್ದೇಶನ ನೀಡುವಂತೆ ಈ ಮೂಲಕ ಕೋರಿದೆ.

ತಮ್ಮ ವಿಶ್ವಾಸಿ,

ಆಯುಕ್ತರು
ಹಾಗೂ ಮತದಾರರ ನೊಂದಣಾಧಿಕಾರಿ,
132–ತುಮಕೂರು ನಗರ ವಿಧಾನಸಭಾಕ್ಷೇತ್ರ,
ತುಮಕೂರು.

| Sl.No | Name | New Enrolled Reference No. | Already Enrolled Epic No | Talluk |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |

| Sl.No | Name | New Enrolled Reference No. | Already Enrolled Epic No | Talluk |
|---|---|---|---|---|
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |
| | | | | |